## ಕಾರಣ



ಮೇಷ್ಟ್ರು: ರಾಮು, ನಿನ್ನೆ ಯಾಕೋ ನೀನು ಶಾಲೆಗೆ ಬರಲಿಲ್ಲ?

ರಾಮು: ಸಾರ್, ಮೊನ್ನೆ ರಾತ್ರಿ ನಾನು ನಿಮ್ಮನ್ನು ಡಾಕ್ಟರ್ ಶಾಪಿನಲ್ಲಿ ನೋಡಿದ್ದೆ. ಅದಕ್ಕೇ ನೀವು ಹುಷಾರಿಲ್ಲದೆ ಶಾಲೆಗೆ ಬರೊಲ್ಲ ಅಂತ ತಿಳಿದು ನಾನು ಶಾಲೆಗೆ ಬರಲಿಲ್ಲ ಸಾರ್.

★★★

ಗಣೇಶ್

## ಪುಟ್ಟಿಯ ಪ್ರಶ್ನೆಗಳು

ಪುಟ್ಟಿ: ಅಮ್ಮಾ, ನಾನು ಹೊರಗಡೆ ಹೋಗಿ ಪಕ್ಕದ ಮನೆ ಪುಟ್ಟನ ಜೊತೆ ಆಟವಾಡಿ ಬರಲಾ?

ತಾಯಿ: ನನಗೆ ಪಕ್ಕದ ಮನೆ ಪದ್ಮಮ್ಮ ಎಂದರೆ ಮೈ ಉರಿಯುತ್ತದೆ. ನೀನು ಪದ್ಮಮ್ಮನ ಮಗನ ಜೊತೆ ಆಟ ಆಡುವುದು ಬೇಡಾ.

ಪುಟ್ಟಿ: ಹಾಗಾದರೆ ನಾನು ಅವನ ಜೊತೆ ಜಗಳವಾಡಿ ಬರಲಾ?

★★★

## ತಪ್ಪು

ಪುಟ್ಟಿ: ಅಮ್ಮಾ! ಚಿಕ್ಕಮಕ್ಕಳನ್ನು ಹೊಡೆಯುವುದು ತಪ್ಪಲ್ಲವೇ?

ತಾಯಿ: ಖಂಡಿತವಾಗಿಯೂ ತಪ್ಪು ಮಗೂ

ಪುಟ್ಟಿ: ಹಾಗಾದರೆ ನೀನು ನಮ್ಮ ಶಾಲೆಗೆ ಬಂದು ನಮ್ಮ ಟೀಚರಿಗೆ ಈ ಮಾತು ಹೇಳುತ್ತೀಯಾ? ಅವರಿಗೆ ಈ ವಿಷಯ ತಿಳಿದಿಲ್ಲ. ಅದಕ್ಕೆ ನನ್ನನ್ನು ದಿನಾ ಹೊಡೆಯುತ್ತಾರೆ.

★★★




## ಗೊತ್ತಿದೆ

ಪುಟ್ಟಿ: ಅಮ್ಮಾ, ನಿನ್ನೆ ರಾತ್ರಿ ನನಗೊಂದು ಒಳ್ಳೆ ಕನಸು ಬಿದ್ದಿತ್ತು

ಅಮ್ಮ: ಹೌದೇನೇ? ಅದೇನು ಕನಸು? ನನಗೂ ಹೇಳೇ

ಪುಟ್ಟಿ: ಆ ಕನಸು ನಿನಗೂ ಗೊತ್ತಿದೆಯಮ್ಮ– ಕನಸಿನಲ್ಲಿ ನನ್ನ ಜೊತೆಗೆ ನೀನೂ ಇದ್ದೆ.

★★★

## ಅದೇ ಕತೆ

ಪುಟ್ಟಿ: ಡ್ಯಾಡೀ, ನೀನು ಅವತ್ತು ಹೇಳಿದ್ಯಲ್ಲಾ... ನೀನು ಚಿಕ್ಕವನಿದ್ದಾಗ ಪರೀಕ್ಷೆಯಲ್ಲಿ ಕಾಪಿ ಮಾಡಿ ಸಿಕ್ಕಿ ಬಿದ್ದು ಡಿಬಾರ್ ಆದದ್ದು...

ಡ್ಯಾಡಿ: ಅಯ್ಯೋ ಅದೆಲ್ಲ ಹಳೇ ಕತೆ... ಅದೆಲ್ಲಾ ಈಗ ಏಕಮ್ಮಾ?

ಪುಟ್ಟಿ: ಅದೇ, ನನಗೂ ಹಾಗೇ ಆಗಿದೆಯಪ್ಪಾ.

**(ಸಂಗ್ರಹ) ಗೀತಾಶಾಸ್ತ್ರಿ**



ಭಕ್ತೆ: ಗುರೂಜಿ, ನನ್ನ ಸಂಸಾರದಲ್ಲಿ ಸ್ವಲ್ಪವೂ ಸುಖವಿಲ್ಲ, ನಾನು ತುಂಬಾ ತೊಂದರೆಯಲ್ಲಿದ್ದೇನೆ ಪರಿಹಾರ ಹೇಳಿ.

ಗುರೂಜಿ: ಮಗಳೇ ಪರಿಹಾರ ಹೇಳುತ್ತೇನೆ. ಚಿಂತೆ ಮಾಡಬೇಡ, ಎಲ್ಲಾ ಸಮಸ್ಯೆಗಳು ಪರಿಹಾರ ಆಗುತ್ತದೆ. ಆದರೆ ಸ್ವಲ್ಪ ಖರ್ಚು ಬರುತ್ತದೆ.

ಭಕ್ತೆ: ಪರವಾಗಿಲ್ಲ ಗುರುಗಳೇ. ಎಷ್ಟು ಖರ್ಚು ಬರುತ್ತದೆ ತಿಳಿಸಿ.

ಗುರೂಜಿ: ನಾನು ನಿನ್ನನ್ನು ಹೆಚ್ಚಿಗೆ ಕೇಳುವುದಿಲ್ಲ. ಪುರಾಣಗಳ ಪ್ರಕಾರ 33 ಕೋಟಿ ದೇವಾನುದೇವತೆಗಳು ಇದ್ದಾರೆ. ನೀನು ಎಲ್ಲಾ ದೇವರುಗಳ ಹೆಸರಿನಲ್ಲಿ ನನಗೆ ಒಂದೊಂದು ರೂಪಾಯಿ ದಾನ ಮಾಡು ಸಾಕು.

ಭಕ್ತೆ: ಒಳ್ಳೆಯದು ಗುರೂಜಿ, ನೀವು ಒಬ್ಬೊಬ್ಬ ದೇವತೆಗಳ ಹೆಸರನ್ನು ಹೇಳಿ ನಾನು ಒಂದೊಂದೆ ರೂಪಾಯಿ ಇಡುತ್ತೇನೆ.

**(ಸಂಗ್ರಹ) ವೀಣಾಶಂಕರ್, ಬೆಂಗಳೂರು**